KACM010001992016

Presented on : 07-01-2016
Registered on : 07-01-2016

**IN THE COURT OF**
**PRL. DISTRICT AND SESSIONS JUDGE. CHIKKAMAGALURU**
**AT Chikkamagaluru,CHIKKAMAGALURU**
**(Presided Over by RAJESHWARI N. HEGDE)**

**SPL.C/1/2016**

Complainant(PROSECUTION):
State by- Karnataka Lokayuktha Police, Chikkamagaluru.

**VERSUS**

Accused:
Sri. Channabasappa, So. Ambaraya Makale, aged 50 years, Executive Officer, Taluk Panchayath Office, Mudigere, Chikkamagaluru District, No. Nasiravadi Village, Kasaba Hobli, Alanda Taluk, Kalaburgi District.

--------------------------------------------------------------------------

State Complainant}: Spl. Public Prosecutor,
Sri. K.S.SHANTHIPRAKASH appearing for Sri. Channabasappa,

--------------------------------------------------------------------------

**Offence punishable under : U/Sec.13(1)(E)r/w13(2)ofPCAct1988. of PREVENTION OF CORRUPTION ACT,**

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ಚಿಕ್ಕಮಗಳೂರು

**Spl.C No:1/2016**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಡಾ॥ ವೆಂಕಟೇಶ್ ದೇಸಾಯಿ | ಪ್ರಾ.ಸಾ.- 35 |
| ತಂದೆಯ ಹೆಸರು | : | ಅಮರಪ್ಪ ದೇಸಾಯಿ | ಚಾ.ಸಾ.- 84 |
| ವಯಸ್ಸು | : | 42 ವರ್ಷ | |
| ಉದ್ಯೋಗ | : | ವೈದ್ಯರು, ವಿಜಯಲಕ್ಷ್ಮಿ ಕ್ಲಿನಿಕ್, ಕಲ್ಬುರ್ಗಿ | |
| ವಾಸ ಸ್ಥಳ | : | ಕಲಬುರ್ಗಿ | |

ದಿನಾಂಕ:**05-08-2025**

ವಿ.ಸಿ.ಯಲ್ಲಿ ಪ್ರಮಾಣ ವಚನ ಬೋಧಿಸಲಾಯಿತು.

(ಕಲಬುರ್ಗಿಯ ವಿಜಯಲಕ್ಷ್ಮಿ ಕ್ಲಿನಿಕ್ ನಲ್ಲಿ ನರ್ಸ್ ಆಗಿ ಕೆಲಸ ಮಾಡುತ್ತಿರುವ ಹುಚ್ಚಪ್ಪ ಭೀಮೇಶ ಅವರು ಆ ರಿಮೋಟ್ ಪಾಯಿಂಟ್ ನಲ್ಲಿ ಕೋ ಆರ್ಡಿನೇಟರ್ ಎಂದು ಇದ್ದಾರೆ).

ಮುಖ್ಯ ವಿಚಾರಣೆ: ಶ್ರೀ ವಿ.ಟಿ.ಟಿ.-ವಿಶೇಷ ಪಿ.ಪಿ. ಯವರಿಂದ:

1. 2009 ರ ಫೆಬ್ರುವರಿ ತಿಂಗಳಿನಿಂದ ಇಲ್ಲಿಯವರೆಗೂ ನಾನು ಕಲ್ಬುರ್ಗಿಯಲ್ಲಿರುವ ವಿಜಯಲಕ್ಷ್ಮಿ ಕ್ಲಿನಿಕ್ ನಲ್ಲಿ ವೈದ್ಯರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿನಾಂಕ: 13-06-2013 ರಂದು ಚಿಕ್ಕಮಗಳೂರು ಲೋಕಾಯುಕ್ತ ಪೊಲೀಸ್ ಉಪಾಧೀಕ್ಷಕರಿಂದ ಆರೋಪಿಗೆ ಸಂಬಂಧಿಸಿದಂತೆ ಮಾಹಿತಿ ಕೇಳಿ ಒಂದು ಪತ್ರ ಬಂದಿತ್ತು. ಆರೋಪಿ ದಿನಾಂಕ: 24-01-2011 ರಂದು ನಮ್ಮ ಕ್ಲಿನಿಕ್‌ಗೆ ಬಂದು ಚಿಕಿತ್ಸೆ ಪಡೆದಿದ್ದು, ಅದರ consultation fee Rs.50/- ಮತ್ತು ECG charge Rs.100/- ಒಟ್ಟು ರೂ. 150/-ಗಳನ್ನು ಚಾರ್ಜ್ ಮಾಡಿರುತ್ತೇವೆ.

3. ಸದರಿ ಪತ್ರಕ್ಕೆ ದಿನಾಂಕ: 03-07-2013 ರಂದು ಉತ್ತರ ಬರೆದಿದ್ದು, ಸದರಿ ಉತ್ತರವನ್ನು ಸಾಕ್ಷಿಯು ವಿಸಿ ಮೂಲಕ ತೋರಿಸಿದಾಗ ನೋಡಿ ಗುರುತಿಸಿದ್ದು, ಸದರಿ ದಾಖಲೆಯನ್ನು ಈಗಾಗಲೇ ನಿ.ಪಿ.102 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ. 102(ಎ) ಎಂದು ಗುರುತಿಸಲಾಯಿತು.

ಪಾಟೀ ಸವಾಲು: ಆರೋಪಿ ಪರ: ಶ್ರೀ ಕೆ.ಎಸ್.ಎಸ್.ಪಿ ವಕೀಲರಿಂದ:

4. ದಿನಾಂಕ: 13-06-2013 ರಂದು ಲೋಕಾಯುಕ್ತ ಪೊಲೀಸರಿಂದ ನಮಗೆ ಪತ್ರ ಬಂದಿತ್ತು. ವಿಜಯಲಕ್ಷ್ಮಿ ಕ್ಲಿನಿಕ್ ನ್ನು ನಡೆಸಲು ಕಾರ್ಪೊರೇಷನ್ ರವರಿಂದ ಲೈಸೆನ್ಸ್ ಪಡೆದಿದ್ದೇನೆ. ಸದರಿ ಲೈಸೆನ್ಸ್ ನಂಬರನ್ನು ನಿ.ಪಿ.102 ರಲ್ಲಿ ನಮೂದಿಸಿಲ್ಲ.

5. ಕರ್ನಾಟಕ ಮೆಡಿಕಲ್ ರಿಜಿಸ್ಟರ್ ನಂಬರ್ ಇದ್ದು, ಪತ್ರದಲ್ಲಿ ಸದರಿ ನಂಬರನ್ನು ನಮೂದಿಸಿಲ್ಲ. ನಿ.ಪಿ.102 ರಲ್ಲಿ ರಸೀದಿ ಸಂಖ್ಯೆಯನ್ನು ನಮೂದಿಸಿಲ್ಲ.

ಆರೋಪಿ ಚಿಕಿತ್ಸೆ ಪಡೆದಿದ್ದರ ಬಗ್ಗೆ ರಸೀದಿಯನ್ನು ಕೊಟ್ಟಿಲ್ಲ. ಲೋಕಾಯುಕ್ತ ಪೊಲೀಸರ ಕೋರಿಕೆ ಮೇರೆಗೆ ಸುಳ್ಳು ದಾಖಲೆಯನ್ನು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ.

6. ಚನ್ನಬಸಪ್ಪ ಅಂದರೆ ಯಾರು, ಅವರ ತಂದೆ ಹೆಸರು ಇವುಗಳನ್ನು ನಮೂದಿಸಿಲ್ಲ ಎಂದರೆ ಸರಿ. ಅವರ ವಯಸ್ಸನ್ನು ಸಹಾ ನಮೂದಿಸಿಲ್ಲ ಎಂದರೆ ಸರಿ.

ಮರು ವಿಚಾರಣೆ ಇಲ್ಲ.
(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)
ಓ.ಹೇ.ಕೇ.ಸ.ಇ.ಎ.ಒ.

Sd/-05-08-2025
(ರಾಜೇಶ್ವರಿ ಎನ್ ಹೆಗಡೆ )
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿ ಸಹಿಃ-

ಕೋ-ಆರ್ಡಿನೇಟರ್ ಸಹಿಃ -

ಚ

Visit **ecourts.gov.in** for updates or download mobile app “**eCourts Services**” from Android or iOS